**ಓ ಎಸ್ ನಂಃ 40/2022**
**ಡಿ ಡಬ್ಲ್ಯೂ ಃ 1**

**ದಿಃ 30.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಂ ಆರ್ ಆರ್ ವಕೀಲರಿಂದಃ**

ನಾರಾಯಣಪ್ಪನವರು ಜೀವಿತಾವಧಿಯಲ್ಲಿ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ವಿಭಾಗ ಆಗಿದೆ ಎಂದು ಹೇಳಿದ್ದೀರಿ ಸದರಿ ವಿಭಾಗದಲ್ಲಿ ಲಕ್ಷ್ಮಮ್ಮನವರಿಗೆ ಭಾಗ ಕೊಟ್ಟಿದ್ದೀರಿ ಎಂದರೆ ಲಕ್ಷ್ಮಮ್ಮ ಯಾರು ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಮ್ಮನವರು ಯಾರು ಎಂದು ತಿಳಿದುಕೊಳ್ಳಲು ತಾವೇನಾದರು ಪ್ರಯತ್ನ ಪಟ್ಟಿದ್ದೀರ ಎಂದರೆ ಲಕ್ಷ್ಮಮ್ಮ ನವರು ಜಯಮ್ಮ ನವರ ಕುಟುಂಬಕ್ಕೆ ಸೇರಿದವರು ಅಲ್ಲ ಆದುದರಿಂದ ಪ್ರಯತ್ನ ಪಟ್ಟಿಲ್ಲ. ನನ್ನ ಮದುವೆ ಸುಮಾರು 20 ವರ್ಷಗಳ ಹಿಂದೆ ನಡೆದಿದೆ. ತಮ್ಮ ಮದುವೆಗಿಂತ ಮುಂಚೆ ಜಯಮ್ಮ ನವರ ಕುಟುಂಬದಲ್ಲಿ ಏನೇನಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಂಜುಂಡಯ್ಯನವರು ಮರಣ ಹೊಂದಿದ ನಂತರ ಮನೆಯ ಉಸ್ತುವಾರಿಯನ್ನು ನಾರಾಯಣಪ್ಪ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಈ ದಾವೆಯನ್ನು 3 ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಸಲ್ಲಿಸಿರುತ್ತಾರೆ. ದಾವಾ ಸ್ವತ್ತುಗಳು ವೆಂಕಟರಮಣಯ್ಯನವರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತುಗಳ ಖಾತೆಯು ವೆಂಕಟರಮಣಯ್ಯನವರ ನಂತರ ನಂಜುಂಡಪ್ಪನಿಗೆ ಮತ್ತು ನಾರಾಯಣಪ್ಪ ನವರಿಗೆ ಬಂದಿದೆ ಎಂದರೆ ಸರಿ. ವೆಂಕಟರಮಣಯ್ಯನವರು ಬದುಕಿದ್ದಾಗಲೇ ದಾವಾ ಸ್ವತ್ತುಗಳ ಖಾತೆಯು ವರ್ಗಾವಣೆ ಆಗಿರುತ್ತದೆ. ಕಲ್ಲಹಟ್ಟಿ ಮತ್ತು ಪಾಲನಹಳ್ಳಿ ನಡುವೆ ಸುಮಾರು 2 ಕಿ. ಮೀ ಅಂತರ ಇದೆ. ಲಕ್ಷ್ಮಮ್ಮ ಮತ್ತು ಜಯಮ್ಮ ರವರು ವಾಸವಾಗಿರುವ ಮನೆಗಳು ಪಾಲನಹಳ್ಳಿಯಲ್ಲಿ ಇದೆಯಾ ಎಂದರೆ ಸಾಕ್ಷಿ ಜಯಮ್ಮ ನವರ ಮನೆ ಇದೆ, ಲಕ್ಷ್ಮಮ್ಮನವರು ನನಗೆ ಗೊತ್ತಿಲ್ಲ. ನಂಜುಂಡಯ್ಯವರು ಲಕ್ಷ್ಮಮ್ಮನವರನ್ನು ಮದುವೆ ಆದಾಗ ತಾವು ಜನಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಸ್ವತಃ ಮುಂದುವರಿದು ಲಕ್ಷ್ಮಮ್ಮ ನಂಜುಂಡಯ್ಯನವರನ್ನು ಮದುವೆ ಆಗಿಲ್ಲ ಎಂದು ನುಡಿಯುತ್ತಾರೆ. ತಾವು ಹೇಳಿದ್ದೀರಿ ಜಯಮ್ಮ ನವರ ಮನೆ ಪಾಲನಹಳ್ಳಿ ಗ್ರಾಮದಲ್ಲಿದೆ ಎಂದು ಸದರಿ ಮನೆ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ನಾರಾಯಣಪ್ಪ ಮತ್ತು ಜಯಮ್ಮನವರ ಹೆಸರಿನಲ್ಲಿದೆ. ಸದರಿ ಮನೆಯು ಅವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳನ್ನು ನೋಡಿ ತಿಳಿದುಕೊಂಡಿದ್ದೀರ ಎಂದರೆ ಹೌದು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಮನೆಯ ವಿಚಾರವಾಗಿ ವಾದಿ ಮತ್ತು ಪ್ರತಿವಾದಿ

ಓ ಎಸ್ ನಂಃ 40/2022
ಡಿ ಡಬ್ಲ್ಯೂ ಃ 1

ನಡುವೆ ವಿಭಾಗ ಆಗಿಲ್ಲ ಎಂದರೆ ಸಾಕ್ಷಿ ವಾದಿ ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯತ್ತಾರೆ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಓ

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**